R No KRNN 12

20 - 2 - 1975

ಸತ್ಯ ಮಾರ್ಗದಲ್ಲಿ ನಿರಂತರವಾಗಿ ದುಡಿಯುತ್ತಿರುವ ಪತ್ರಿಕೆ

in ★ ★ ★ ★ ★

58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
- For Influential Publicity -

ಸ್ಥಾಪಕರು: ಆರಮನೆ ಶಿರಸ್ತೇದಾರ್ ಎಂ. ವಿ. ಕುಟ್ಟಂ ಸಂಪಾದಕರು: ಧರ್ಮಪತ್ನಿ ಜಾರಪಿರತ ಎಂ. ಎಸ್. ಕೃಷ್ಣರಾವ್ 8 ಪುಟ

ತೆರಿಗೆ ವಿಧಿಸುವುದು ಅನಿವಾರ್ಯವಾಗಿದೆ

ಪರಿಷ್ಕೃತ ಕೇಳಿ

75-76 ರ ಅಂದಾಜು ಪಟ್ಟಿ ಕಾಲದಲ್ಲಿ ಕೇಂದ್ರದ ಹಣಕಾಸು ಪರಿಷ್ಕೃತಿ ಪ್ರಾಯಶಃ ಕಳೆದ ಸಾಲಿಗಿಂತ ಕೇಳಾಗಿದೆ ತೆರಿಗೆ ವಿಧಿಸುವದು ಅನಿವಾರ್ಯವಾಗುವಂತಿದೆ ಎಂದು ನವ ದೆಹಲಿಯಿಂದ ಬಂದ ವರದಿಯೊಂದು ತಿಳಿಸುತ್ತದೆ.

●

ಜೆ ಪಿ ಮನವಿ

ಪ್ರಧಾನಿಯವರು ಮಾಡುತ್ತಿರುವದಾಗಿ ಕಂಡುಬರುವ ಸರ್ವಾಧಿಕಾರತ್ವದ ಪ್ರಗತಿಯನ್ನು ತಡೆ ಮಾಡಿ, ದೇಶದಲ್ಲಿ ಪ್ರಜಾಪ್ರಭುತ್ವ ಬಲಪಡಿಸಲು ಬೀಹಾರು ಜಳುವಳಿಗೆ ಸಹಾಯ ಮಾಡಿ ಎಂದು ಜನತೆಗೆ ಶ್ರೀ ಜಯಪ್ರಕಾಶ ನಾರಾಯಣರು ವಿದ್ಯಾರ್ಥಿಗಳ ಮತ್ತು ಯುವಕರ ಭಾರಿ ಮೇಳ ಉದ್ದೇಶಿಸಿ ಸಂಬ್ಬಾದಲ್ಲಿ ಭಾಷಣ ಮಾಡುತ್ತಾ ತಾವು ತುನವಿ ಮಾಡಿದ್ದಾರೆ.

●

ಧಾರಿಯ ಪ್ರಪ್ತನೆ

ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಿಗೆ ಉತ್ತರ ಕೊಡುತ್ತಾ, ಕೇಂದ್ರ ವಸತಿ ಮಂತ್ರಿ ಶ್ರೀ ವೀಹನ್ ಧಾರಿಯವರು, ಕೆಂಪು ಅಪಾಯದ ಕುರಿತು ತಾವಿತ್ತಿರುವ ಎಚ್ಚರಿಕೆಯಾಗಲೀ, ಜಯಪ್ರಕಾಶರು ಎತ್ತಿರುವ ಕೆಲವು ಸಮಸ್ಯೆಗಳು, ಪ್ರಮುಖವೂ ಮೂಲವೂ ಆಗಿದ್ದು ಅವನ್ನು ಬಿಡಲಾಗುವುದಿಲ್ಲವೆಂದು ತಾವು ಹೇಳಿರುವುದರಲ್ಲಿ ತಪ್ಪೇನು ಇಲ್ಲವೆಂದು ತಿಳಿಸಿದರು. ತಾವು ಹೇಳಿಕೆಯನ್ನು ದೇಶದ, ಪ್ರಜಾಪ್ರಭುತ್ವದ, ಪಮ್ಮ ಪಕ್ಷದ ಮತ್ತು ಪ್ರಧಾನಿಯವರ ಹಿತಕ್ಕಾಗಿ ಮಾಡಿರುವದಾಗಿ ತಿಳಿಸಿದರು ಇದು ಅರಣ್ಯವಾದರೆ, ಪದೇ ಪದೇ ಇದನ್ನು ನಿರ್ಭಯವಾಗಿ ಮಾಡುವದಾಗಿ ತಿಳಿಸಿದರು.

○ ಮಂಗಳೂರಿನಲ್ಲಿ ಪ್ರಕಟಿಸುವಾಗಿ 7 ನೇ ಮಾರ್ಚ್ ನೆಹರು ಮೈದಾನದಲ್ಲಿ ಮಹಿಳೆಯರ ಕುಸ್ತಿ ಪಂಥ ಇದೆ

ಸುಪ್ರೀಂ ಕೋರ್ಟ್‌ಗೆ ಅಪೀಲು

ಗಂಗವತಿ ಪೌರಸಭೆ ಚುನಾವಣೆಯನ್ನು ಮಾರ್ಚ್ 8 ಕ್ಕೆ ಮುಂಚೆ ನಡೆಸಬೇಕೆಂದು ಸೂಚಿಸಿದೆ ಈ ನಿರ್ಣಯದಲ್ಲಿ ಮೈಸೂರು ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅಪೀಲು ಮಾಡಲಿರುವದಾಗಿ ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು

●

ಪಕ್ಷದವರಿಗೆ ಸೂಚನೆ

ಬೆಂಗಳೂರಿನಲ್ಲಿ ಸೇರಿದ್ದ ಕೆ ಪಿ ಸಿ ಕಾರ್ಯಕಾರಿ ಸಮಿತಿ ಸಭೆ ತಮ್ಮ ಪಕ್ಷದವರಿಗೆ ಭೂ ಸುಧಾರಣೆ ಶಾಸನದಲ್ಲಿರುವ ಹರಿವಿತಿಗೆ ಹೆಚ್ಚಾಗಿರುವ ತಮ್ಮ ಭೂಮಿಯನ್ನು ಸರ್ಕಾರಕ್ಕೆ ಒಪ್ಪಿಸಲು ಕರೆ ಕೊಟ್ಟಿದೆ.

★

ಹೆಗ್ಡೆಯವರ ಟೀಕೆ

ಭೂ ಸುಧಾರಣೆ ನ್ಯಾಯಾಂಗ ಮಂಡಲಿಯಲ್ಲಿ ಎಮ್ಮೆ ಕದ್ದ ಅಪರಾಧಕ್ಕೆ ದಂಡನೆಗೊಳಗಾದ ಓರ್ವರಿರುವರು. ಅನೇಕಲ್ ತಾಲ್ಲೂಕಿನಲ್ಲಿ 3 ಸಾವಿರ ಎಕರೆ ಭೂಮಿ ಪಡೆದಿರುವ ಓರ್ವ ಜಮೀಂದಾರನ ಪತ್ನಿ ಇರುವರು ಎನ್ ಜಿ ಇ ಎಫ್ ನೌಕರರೊರ್ವರು ಇರುವರು ಎಂದು ನಿದಾನ ಪರಿಷತ್ತಿನಲ್ಲಿ ಶ್ರೀ ರಾಮಕೃಷ್ಣ ಹೆಗ್ಡೆ ತಿಳಿಸಿರುವರು

★ ಮೈಸೂರು ರಾಜ್ಯದ ಸಬಾರ್ಡಿನೇಟ್ ಕೋರ್ಟ್‌ಗಳು ಶನಿವಾರ ಮಧ್ಯಾಹ್ನ ಕೆಲಸ ಮಾಡುವದಿಲ್ಲ ಮಾರ್ಚ್ 1 ರಿಂದ ಈ ಕ್ರಮ ಹೈ ಕೋರ್ಟು ಸೂಚನೆ.

★ ಕೆಲಸ ಕೊಡಿಸುವ ಆಕೆಯಿಂದ ಬೋಂಬಾಯಿಗೆ ಕರೆಲ್ಪಟ್ಟ ಓರ್ವ ಯುವತಿ, ೪ ನ್ನಡದರ ಹುಡುಗಿಯರನ್ನು ವೇಶ್ಯಾಗೃಹವೊಂದರಿಂದ ಬಿಡಿಸಲಾಯಿತು.

● ಪಟ್ಟಣಗಳ ಭೂ ಮಿತಿ ಮಸೂದೆ ಸಂಸತ್ತಿನ ಈ ಅಧಿವೇಶನದಲ್ಲಿ ಬರಲಿದೆ.

ಅರಬ್ ವಿದ್ಯಾರ್ಥಿಗಳ ಸಂಬಂಧದ ಸ್ವಾರಸ್ಯ ವಿಷಯಗಳು

ಸಾ: ಆಂಟೋನಿಯಾ— ಒಂದು ಮಧ್ಯದ ಅಂಗಡಿಯಲ್ಲಿ ಒಬ್ಬ ಅರಬ್ ರಾಜಕುಮಾರನಿಗೆ ಒಬ್ಬಳು ವೇಶ್ಯೆಯ ಪರಿಚಯವಾಯಿತು – ನಂತರ ಅವಳು ಅವನ ಹೊಸ 12000 ಡಾಲರು ಕಾರಿನ ಬೀಗದಕೈ ಪಡೆದುಕೊಂಡು ಹೋದವಳು ಮತ್ತೆ ಬರಲೇ ಇಲ್ಲ ; ಪೋಲೀಸಿಗೆ ತಿಳಿಸಿದರೆ ತನ್ನ ವಿಷಯ ಬಹಿರಂಗವಾಗುವುದೆಂದು ಅವನು ಸುಮ್ಮನಿದ್ದು ಬಿಟ್ಟನು – ಈ ವಿಷಯವನ್ನು ಆ ರಾಜಕುಮಾರನ್ನು ಹತ್ತಿರದ ಅಮೇರಿಕಾ ಮಿಲಿಟರಿ ನಿಲ್ದಾಣದಲ್ಲಿಯ ತನ್ನ ಸ್ನೇಹಿತನಿಗೆ ತಿಳಿಸಿದನು.

★

ಒಬ್ಬ ಇರಾನಿನ ಯುವಕ ವಿಮಾನಚಾಲಕನು ಲ್ಯಾಕಲೆಂಡ್ ವಿಮಾನ ನಿಲ್ದಾಣದಲ್ಲಿಳಿದು ತನ್ನ ಕೊಠಡಿಯಲ್ಲಿ ಮಂಚದ ಮೇಲೆ ತನ್ನ ಕೋಟನ್ನಿಟ್ಟು ಕೆಲವು ನಿಮಿಷಗಳು ಹೊರಗೆ ಹೋದನು – ತಿರುಗಿ ಬಂದಾಗ ಅವನ 120 ಡಾಲರುಗಳು ಮಾಯವಾಗಿತ್ತು.

★

ಒಬ್ಬ ಪೌದಿ ಅರೇಬಿಯಾ ವಿದ್ಯಾರ್ಥಿ ರಕ್ಷಣ ಭಾಷಾ ಸಂಸ್ಥೆಯಲ್ಲಿ ತನ್ನ ತರಗತಿಗೆ ಹೋದಾಗ ಅಲ್ಲಿನ ಮಹಿಳಾ ಶಿಕ್ಷಕಿಯಮ್ಮನ್ನು ನೋಡಿ ದಿಗ್ಭ್ರಮೆಗೊಂಡನು ; ಆಕೆಯ ನುಂಡಿಯ ಮೇಲೆ ನೋಡುತ್ತಿದ್ದು ಮನಸ್ಸು ಸ್ತಿಮಿತಗೊಳ್ಳದೆ ಹೊರಗೆ ಬಂದುಬಿಟ್ಟನು ಅಲ್ಲಿಯ ಸಾಂಸ್ಕೃತಿಗೆ ಹೊಂದಿದ್ದ ವಿದ್ಯಾರ್ಥಿಗಳಿಗೆ ಇಲ್ಲಿಯ ತುಂಡುಲಂಗ, ಅರೆ ಮುಚ್ಚಿದ ಎದೆ, ಮದ್ಯದ ಪುಟಿಯಾಟ, ಹಿಂಸಾಕೃತ್ಯ, ಅಪರಾಧಗಳು ಡೊಂಗುಬಡಿದಂತಾಗಿದೆ – ಅವರು ತಮ್ಮ ಸ್ಥಳಗಳಲ್ಲಿ ಇಂಥವುಗಳನ್ನು ಕಂಡಿರುವುದಿಲ್ಲ – ಮಧ್ಯವಾರ್ಷಿಕದ ವಿದ್ಯಾರ್ಥಿಗಳಿಗೆ ಇದು ಮರಳುಗಾಡಿನಲ್ಲಿ ಸ್ವರ್ಗ ಕಂಡಂತಾಗಿದೆ – ಅಲಾಮೋ ಇವರು ಸೇರುವ ಸ್ಥಳವಾಗಿದೆ ; ಅಲ್ಲಿ ದೇಶಾದಮ್ಯ ಹುಡುಗಿಯರಿದ್ದು ಇವರು ತನುಗೆ ಬೇಕಾದ ಇಬ್ಬರು ಮೂವರು ಹುಡುಗಿಯರನ್ನು ಆರಿಸಿಕೊಳ್ಳಬಹುದು – ಒಬ್ಬ ವಿದ್ಯಾರ್ಥಿಯು ಅಲಾಮೋದಲ್ಲಿಯ ಹುಡುಗಿಯರ ಸೊಬಗು ಆನಂದವನ್ನು ವಿವರಿಸಿ ತನ್ನ ತಂದೆ ಷೇಕ್‌ರಿಗೆ ಬರದಾಗ, ಆ ಷೇಕ್‌ರು, ಅಲಾಮೋವನ್ನು ತಾನು ಕೊಂಡುಕೊಳ್ಳಬಹುದೇ ಎಂದು ಹೌಸ್ಟನ್ನಿನ ನ್ಯಾಯವಾದಿಯನ್ನು ಕೇಳಿದನು – ಆದರೆ ಇವನ ಕೇಳಿಕೆ ತಿರಸ್ಕರಿಸಲ್ಪಟ್ಟಿತು.

○

● ವಾಷಿಂಗ್ಟನ್— ಗುರುತ್ವಾಕರ್ಷಣೆಯ ಕುರಿತು ನೀರಿರುವದೆಂದು ಅರಿಜೋನಾ ವಿಶ್ವವಿದ್ಯಾನಿಲಯದ ವಿಜ್ಞಾನಿಗಳ ಅಭಿಪ್ರಾಯಪಟ್ಟಿದ್ದಾರೆ.

● ಪುಣೆಯ ಒಂದು ಆಸ್ಪತ್ರೆಯಲ್ಲಿ 19 ವರ್ಷದ ಮಹಿಳೆ 4 ಹೆಣ್ಣು ಮಕ್ಕಳನ್ನು ಹೆತ್ತಳು ಅವು ಮರಣ ಹೊಂದಿದವು

★ 3 ವರ್ಷಗಳ ಹಿಂದೆ ನಿಧನರಾದ ಶ್ರೀಮತಿ ಮಂಜೇರಿ ಕಮಲಾಂಬರವರನ್ನು ಅಂತಿಮ ಅಂತರರಾಷ್ಟ್ರದ ಮಹಿಳಾ ವರ್ಷದ ಸಮಾರಂಭ ಸಮಿತಿಗೆ ಸದಸ್ಯೆಯಾಗಿ ಸೇರಿಸಿದೆ.

○ ತಾವು ಈ ವಾಕ್ಯ ಎಲ್ಲರಿಗೂ ಆಶ್ಚರ್ಯ ಉಂಟು ಮಾಡುವ ಹಾಗೆ ವರ್ತನೆಯನ್ನು ಅನುಸರಿಸುವುದಾಗಿ ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಗಫೂರ್ ತಿಳಿಸಿದರೆಂದು ಪಾಟ್ನಾ ವಾರ್ತೆ.

ಸಭಾಪರಿತ್ಯಾಗ

ನವದೆಹಲಿ— ಜುಮ್ಮಾ ಮಸೀದಿ ಭಾಗದಲ್ಲಿ ಈಚೆಗೆ ನಡೆದ ಘಟನೆಗಳ ಬಗ್ಗೆ ನ್ಯಾಯಾಂಗ ವಿಚಾರಣೆ ಕೈಗೆತ್ತಿಕೊಳ್ಳಲು ಸರ್ಕಾರ ತೀರ್ಮಾನಿಸಿದ್ದರಿಂದ ಲೋಕಸಭೆಯಲ್ಲಿ ಬುಧವಾರ ಎಲ್ಲಾ ವಿರೋಧಿಗಳೂ ಸಭಾಪರಿತ್ಯಾಗ ಮಾಡಿದರು.

ಅಕ್ಕಾಯಿಯ ಭವಿಷ್ಯ

ಬೆಂಗಳೂರು— ಅಕ್ಕಾಯಿ ಮುಂದುವರಿಯ ದೇಕೆ, ವಜಾ ಆಗದೇಕೆ, ಎಂಬ ವಿಚಾರದ ಬಗ್ಗೆ ನೇಮಿಸಲಾಗಿದ್ದ ಸಮಿತಿಯ ವರದಿ ಬಂದಿರುವುದಾಗಿಯೂ, ಸರಕಾರ ಈ ಬಗ್ಗೆ ಕ್ಷಿಪ್ರಗತಿಲ್ಲೇ ನಿರ್ಧರಿಸಲಿರುವುದೆಂದೂ ಶಾಸನಸಭೆಯಲ್ಲಿ ತಿಳಿಸಲಾಯಿತು.

ಟೀ ಕೈಗಾರಿಕೆ

ನವದೆಹಲಿ — ಟೀ ಕೈಗಾರಿಕೆಯ ರಾಷ್ಟ್ರೀಕರಣವಿಲ್ಲವೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

ಪಾರ್ಲಿಮೆಂಟಿನ ರಜತ ಮಹೋತ್ಸವ

ನವದೆಹಲಿ— ಭಾರತ ಪಾರ್ಲಿಮೆಂಟು 1977 ರಲ್ಲಿ 25 ವರ್ಷಗಳ ಕಾರ್ಯ ಮುಗಿಸುತ್ತದೆ ; ಈ ಸಂದರ್ಭದ ಗುರುತಾಗಿ ರಾಷ್ಟ್ರವು ಈ ವರ್ಷ ಪ್ರಾರಂಭದಿಂದ 2 ವರ್ಷಗಳ ಕಾಲ ಸಮಾರಂಭಗಳನ್ನು ನಡೆಸುವುದು ಎಂದು ಲೋಕಸಭಾ ಸ್ಪೀಕರ್ ಶ್ರೀ ಧಿಲ್ಲಾ ತಿಳಿಸಿದರು - ಇದರ ಸವಿನೆನಪಿನ ಅಂಚೆಚೀಟಿಯನ್ನು ಅಂಚೆ ತಂತಿ ಇಲಾಖೆ ಹೊರಡಿಸಿದೆ

ಆಂತರ ರಕ್ಷಣಾ ಶಾಸನ ರೀತ್ಯಾ ಬಂಧನ

ಮೈಸೂರು— ಕೊಳ್ಳೇಗಾಲದ ಒಬ್ಬ ಸಗಟು ಆಹಾರಧಾನ್ಯ ವ್ಯಾಪಾರಿಯು ಆಂತರ ರಕ್ಷಣಾ ಶಾಸನದಂತೆ ಬಂಧಿಸಲ್ಪಟ್ಟು, ಮೈಸೂರು ಜೈಲಿಗೆ ಒಯ್ಯಲ್ಪಟ್ಟನು

ವುಡ್‌ಲಾಂಡ್ಸ್ 21 2 75 ರಿಂದ

ಅಮೋಘ ಆರಂಭ

ಕನ್ನಾ ಕಮಾರಿ

ಅಪೂರ್ವ ಕಲರ್ ಮಲಯಾಳಂ ಕಲಾಕೃತಿ

ಪಾತ್ರ– ಕಮಲಾ ಹಸನ್ ವೀಟೂ ಬಹದ್ದೂರಿ ದಿನಕ್ಕೆ ಪ್ರದರ್ಶನಗಳು

ಅಪೇರಾ 21 2 75 ರಿಂದ

ಬಾಳು ಬೆಳಗಿತು

ಅಮೋಘ ಕನ್ನಡ ಚಿತ್ರ

ಪಾತ್ರ – ರಾಜಕುಮಾರ್ ಜಯಂತಿ ದ್ವಾರಕೀಶ್ ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Protect the Cow

SHAKTI

SUDHA

A Superb Tonic

Contribute Liberally

to the National Defence Fund

Quality Printing Neat Binding

Lakshminarasimha Press

Sivarampet Mysore 1

Help The Gorakshana

—Humanitarian Propoganda Monthly—

Edited Printed and Published by Dharmapracharanirata M S. Krishna Rao (Proprietor) at the Satyagraha Press, Chamarajapuram Mysore